ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:3002/2019

ಚಾಸಾ:1 ಪ್ರಾಸಾ:1

ದಿನಾಂಕ: 27.11.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಪ್ರಭಾವತಿ ಶೆಟ್ಟಿ |
| ಗಂಡನ ಹೆಸರು | : | ವಿಶ್ವನಾಥ ಶೆಟ್ಟಿ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಬೇಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ದಿ: 26-12-2018 ರಂದು ನನ್ನ ತಮ್ಮನಾದ ಪ್ರಸನ್ನ ಶೆಟ್ಟಿ ನಮ್ಮ ಮನೆಯಿಂದ ಸುಮಾರು 50 ಮೀಟರ್ ದೂರದಲ್ಲಿ ಹೊಸ ಮನೆ ನಿರ್ಮಿಸುತ್ತಿದ್ದು, ನಾನು ಅಲ್ಲಿ ಅಂಗಳದಲ್ಲಿ ಸಂಜೆ ಸುಮಾರು 6 ಗಂಟೆ ಸಮಯದಲ್ಲಿ ನಮ್ಮ ಮನೆ ಬಳಿ ಇದ್ದಾಗ ಅಶೋಕ ಶೆಟ್ಟಿ, ಪ್ರಪುಲ್ಲಾ ಶೆಟ್ಟಿ, ಆದರ್ಶ ಕುಮಾರ್, ಸತೀಶ್ ಶೆಟ್ಟಿ, ಮಂಜುನಾಥರವರು ಒಟ್ಟಾಗಿ ನನ್ನ ತಮ್ಮನ ಮನೆಯ ಹತ್ತಿರ ಬಂದು ಕೂಗುತ್ತಿದ್ದು, ಆಗ ನಾನು ನನ್ನ ತಮ್ಮನ ಮನೆ ಬಳಿ ಹೋಗಿ ಕೂಗುತ್ತಿರುವುದನ್ನು ಹೋಗಿ ನೋಡಿದ್ದು ಆಗ ಆರೋಪಿತರೆಲ್ಲರೂ ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು, ಅವರ ಪೈಕಿ ಸತೀಶ್ ಶೆಟ್ಟಿ ಮತ್ತು ಅಶೋಕ ಶೆಟ್ಟಿ ನನ್ನ ತಲೆಯ ಜುಟ್ಟಿಗೆ ಕೈ ಹಾಕಿ ನನ್ನ ಮಾನ ಹಾನಿ ಮಾಡುವ ಉದ್ದೇಶದಿಂದ ದೂಡಿರುತ್ತಾರೆ ಹಾಗೂ ಜೀವ ಬೆದರಿಕೆ ಹಾಕಿರುತ್ತಾರೆ. ಆಗ ನಾನು ಕೂಗಾಡಿದ್ದು ಚಾಸಾ-2ರವರು ಸ್ಥಳಕ್ಕೆ ಬಂದಿರುತ್ತಾರೆ.

ಆ ವೇಳೆಗೆ ಚಾಸಾ-4 ಮತ್ತು 5ರವರು ಸ್ಥಳಕ್ಕೆ ಬರುವುದನ್ನು ನೋಡಿ ಆರೋಪಿತರೆಲ್ಲರೂ ಓಡಿ ಹೋಗಿರುತ್ತಾರೆ. ಮರುದಿನ ನಾನು ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಗಾಯದ ಸೂಚನಾ ಪತ್ರವನ್ನು ಠಾಣೆಗೆ ಕಳುಹಿಸುತ್ತಾರೆ ಎಂದು ತಿಳಿದುಕೊಂಡಿದ್ದು ಆದರೆ ಯಾವ ಕ್ರಮ

ವಹಿಸದೆ ಇದ್ದ ಕಾರಣ ಅನಂತರ ಠಾಣೆಗೆ ಹಾಜರಾಗಿ ದಿಃ 27-12-2018 ರಂದು ದೂರು ನೀಡಿರುತ್ತೇನೆ.

ದಿಃ 28-12-2018 ರಂದು ಪೊಲೀಸರು ಮನೆಯ ಬಳಿ ಬಂದು ಸ್ಥಳವನ್ನು ನಾನು ತೋರಿಸಿದಂತೆ ಪರಿಶೀಲಿಸಿ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆಯನ್ನು ಸಂಜೆ 4-30ಕ್ಕೆ ಜರುಗಿಸಿರುತ್ತಾರೆ. ಸದ್ರಿ ದಿನ ನಾನು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ.

ದಿಃ 04-01-2019 ರಂದು ನ್ಯಾಯಾಧೀಶರ ಮುಂದೆ ನಾನು ನ್ಯಾಯಾಲಯದಲ್ಲಿ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ಸದ್ರಿ ದೂರು, ಪಂಚನಾಮೆ, ಕಲಂ 164ರ ಹೇಳಿಕೆಯಲ್ಲಿ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಗಳನ್ನು ನಿಪಿ-1 ರಿಂದ 3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ ನಿಪಿ-3(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ. ಅರವರು ಸಾಕ್ಷಿಯು ಮೇಲೆ ನುಡಿದ ಇನ್ನೂ ಮೂರು ಜನ ಆರೋಪಿತರನ್ನು ಪ್ರಕರಣದಲ್ಲಿ ಸೇರಿಸುವಂತೆ ಅರ್ಜಿ ಸಲ್ಲಿಸುವುದಾಗಿ ಕಾಲವಕಾಶ ಕೋರಿರುತ್ತಾರೆ. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**